ಶ್ಯಾಮಲಾ ದಂಡಕ.

(ಕರ್ನಾಟಕ ಭಾಷಾಂತರ)

ಬರಹಗಾರ:—

ವಿ. ರಾಮ ಶರ್ಮಾ.

1934.

ಬೆಲೆ: 0—1—6.

ಮಂಗಳೂರು ಪ್ರೆಸ್,
ರಥಬೀದಿ, ಮಂಗಳೂರು.

ಮುನ್ನುಡಿ.

ಕನ್ನಡದಲ್ಲಿ ಸ್ತೋತ್ರಗಳೆಂದರೆ ಬಹು ವಿರಳ. ಇದ್ದರೂ ಹಾಡುಗಬ್ಬವಾಗಿ. ರಾಗಜ್ಞಾನವಿಲ್ಲದವರು ಅವುಗಳನ್ನು ಹಾಡಲು ಬರುವಂತಿಲ್ಲ. ಸಂಸ್ಕೃತ ಭಾಷೆಯ ಸ್ತೋತ್ರಗಳಾದರೊ ಸಂಸ್ಕೃತವನ್ನರಿಯದ ಅಚ್ಚಗನ್ನಡಿಗರಿಗೆ ಅರ್ಥವಾಗುವಂತಿಲ್ಲ. ಅರ್ಥವಾಗದ ಓದಿನಿಂದ ಉಪಯೋಗವಾದರೂ ಏನಿದೆ? ಅದರಿಂದ ಕನ್ನಡಿಗರು ತಮ್ಮ ಮಾತೃಭಾಷೆಯಾದ ಕನ್ನಡದಿಂದಲೇ ದೇವರನ್ನು ಸ್ತುತಿಸಿ, ಇಷ್ಟಾರ್ಥವನ್ನು ಒದಗಿಸಿಕೊಳ್ಳುವುದಕ್ಕಾಗಿ ಮಹಾಕವಿ ಕಾಳಿದಾಸಕೃತ ಶ್ಯಾಮಲಾ ದಂಡಕವನ್ನು ಕರ್ನಾಟಕ ಭಾಷೆಯಲ್ಲಿ ಯಥಾಮತಿ ಪರಿವರ್ತಿಸಿರುತ್ತೇನೆ. ಈ ನನ್ನ ಉದ್ಯಮವು ಸಫಲವಾದರೆ ನಾನು ಕೃತಾರ್ಥನಾಗುವೆನು.

ಇತಿ

ಪಿ. ರಾಮ ಶರ್ಮ.

॥ ಶ್ರೀ ॥

ಶ್ಯಾಮಲಾ ದಂಡಕ

ಜಯ ಜನನಿ! ಸೊದೆಗಡಲ
ನಡುವಿನೊಳು ಮಿಸುಪ ಮಣಿ
ದೀವಿಯೊಳಗುದಿಸಿರ್ದ
ಬಿಲ್ವ ವನ ಮಧ್ಯದೊಳು
ಕಲ್ಪತರು ಸನ್ನಿಭದ
ಸುರಗಿ ಬನದೊಳಗಿರವ
ಮೆಚ್ಚಿಹಳೆ!
ತೊವಲುಡೆಯ ಪರಶಿವನ
ನಚ್ಚಿಹಳೆ!
ಜಗಗಳ ನಿರ್ಮಿರ್ಚಿಹಳೆ!

ಸಾದರದಿ ಹಾಡುತಿಹ
ಗಾಯನದ ಹೊಗಳಿಕೆಯ
ಮೋಡಿಯಿಂ ಲೋಲವಹ
ಸುರಗಿ ಹೂ ಮಾಲೆಯನು
ಮುಡಿದಿರ್ದ ಜಡೆಯಾಡಿ
ರಂಜಿಸುವ ನಟ್ಟಿಲುಬಿ-
ನಿಂದೆಸೆದು ಮೆರೆಯುವಳೆ!
ಲೋಕವನು ಪೊರೆಯುವಳೆ!

ತಲೆದೊಡವನೊಡರಿಸಿ-
ರ್ದುಡುಪತಿಯ ರೇಖೆಯ ಮ-
ಯೂಖಗಳ ಗಡಣದಿಂ-
ದೊಡವೆರೆದ ಮಿಸುಪ ಮುಂ-
ಗುರುಳಿನಿಂ ರಂಜಿಪಳೆ!
ಪಾಪವನು ಭಂಜಿಪಳೆ!

ಮನ್ಮಥನ ಸಡಗರದ
ಬಿಲ್ಲಿನಂದವ ತಳೆವ

ಪುರ್ವುವೆಳ ವಳ್ಳಿಗಳ
ಪೂವೆಂಬ ಸಂದೆಯವ-
ನೊಂದಿಸುವ ಲೋಚನಗ-
ಳುಳ್ಳವಳೆ!
ವಾಕ್ಸುಧಾ ಸೇಚನವ
ಗೈವವಳೆ!

ಸಂದ ಗೋರೋಚನದ
ತಿಲಕದಿಂದೆಸೆವ ಹಣೆ
ಯುಳ್ಳವಳೆ!
ಮಣಿದರನು ಕಾವವಳೆ!

ಕೊಪ್ಪುಗಳೊಳೊಪ್ಪುತಿಹ
ಮುತ್ತುಗಳ ಮೊತ್ತದಿಂ-
ದೊತ್ತಿಬಹ ತಂಗದಿರಿ-
ನಿಂದೆಸೆವ ಕೆನ್ನೆಗಳ
ಮೇಲ್ ಬರೆದ ಕತ್ತುರಿಯ

ಪತ್ರದಂತಿರುತಿರುವ
ರೇಖೆಯಿಂ ಹೊರ ಹೊರಟು
ಬರುತಿರುವ ಪರಿಮಳಕೆ
ಮುತ್ತುತಿಹ ಪರಮೆಗಳ
ಗಾನದಿಂ ಮೇಳೈಸಿ
ಗಂಭೀರತರವಾದ
ತಂತಿಯಿಂಚರವನ್ನು
ಹೊರಡಿಸುವ ಬೀಣೆಯನು
ಬಾಜಿಪಳೆ!
ಜಗದೆ ರಾರಾಜಿಪಳೆ!

ಬೀಣೆಯನು ಬಾಜಿಸುವ
ಮೋಜಿನಿಂ ತೊನೆಯುತಿಹ
ತಾಳೆಗರಿಯಿಂ ಕಟ್ಟೆ-
ದೋಲೆಯನು ಕಿವಿಗಳಲಿ
ತೊಟ್ಟಿಹಳೆ!
ವಿಶ್ವದೊಳಗೊಟ್ಟಿಹಳೆ!

ಅಂದವಿಗೆ ಕಿವಿಗಳೊಳ-
ಗೊಂದಿಸಿದ ನೀಲಾಬ್ಜ-
ವನು ತನ್ನ ಕಡೆಗಣ್ಣ
ಬೆಳಕಿನಿಂ ಬೆಳಗಿಪಳೆ!
ಕಂಟಕವ ತೊಲಗಿಪಳೆ!

ಬೆವರ ಬಿಂದುಗಳಿಂದೆ
ಮಿರುಗುತಿಹ ಹಣೆಯ ಸೌಂ-
ದರ್ಯದೊಬ್ಬುಳಿಯ ಸಂ-
ದೇಹವಂ ಮಿಗೆ ಮಾಳ್ಪ
ಮುಗುತಿಯ ಮುತ್ತುಗಳಿ-
ನೆಸೆಯುವಳೆ!
ಭುವನಗಳ ಪೊಸೆಯುವಳೆ!

ಕಪ್ಪುರದಿ ಗಮಗಮಿಸು
ವೆಲೆಯಡಕೆಯೊತ್ತಿನಿಂ
ಥಳಥಳಿಸುವೆಳ ನಗೆಯ

ಮೊಗಸಿರಿಯನುಳ್ಳವಳೆ!
ಭಕ್ತರಿಗೆ ಸಂಪದವ-
ನಳೆಯುವಳೆ!
ಪಾಪಗಳ ತೊಳೆಯುವಳೆ!

ದುಂಡು ಮಲ್ಲಿಗೆಯ ನಿಜ
ಕಾಂತಿಯಿಂ ಖಂಡಿಸುವ
ಸುಲಿಪಲ್ಲ ಸಾಲುಗಳ
ಮೇಲಿಂದ ಲೀಲೆಮಿಗೆ-
ಯೊಗೆತರ್ಪ ನಿರ್ಮಲದ
ಬೆಳಕಿನಲೆಯಾಟಗಳ
ಕೂಟದಿಂ ಶೋಭಿಸುವ
ನಸುನಗೆಯ ಸೂಸುತಿಹ
ಚೆಂದುಟಿಯ ಚಂದದಿಂ
ತನಿವಣ್ಣ ತೊಂಡೆಯನು
ಹಳಿವವಳೆ!

ನಿಜಕರದಿ ವೀಣೆಯೊ-
ಳ್ದಂಡವನು ತಳೆವವಳೆ! ॥ ೧ ॥

ಲಲಿತವಹ ನವಯೌವ-
ನಾರಂಭವೆಂದೆಂಬ
ಪೆರೆಯುದಯದಿಂ ಪೆರ್ಚಿ
ವೇರೆಯನು ಮೀರಿರ್ದ
ಸೌಂದರ್ಯದಮೃತಾಬ್ಧಿ-
ಯಿಂದೊಗೆದ ಶಂಖವೋ
ಎಂದೆನಲ್ ತೋರುತಿಹ
ಸಿರಿಗೊರಲ ಪೊತ್ತಿಹಳೆ!
ಸಾಧಕಗೆ ಬಿಜ್ಜೆಯನು
ತೆತ್ತಿಹಳೆ!

ಕೆತ್ತಿರ್ದ ರತ್ನಗಳ
ಶೋಭೆಯಿಂ ಶೋಭಿಸುವ
ಹಾರಾದಿ ಭೂಷಣಗ-

ಳಿಂದೊಗೆದ ಕಾಂತಿಯಿಂ
ಝುಗಝುಗಿಪ ಕುಂದಿಲ್ಲ-
ದಂಗಗಳ ಮಂಗಳೆಯೆ!
ಲೋಕೈಕ ಮಂಗಳೆಯೆ!

ರತ್ನಗಳ ತೋಳ್ಬಳೆಯ
ಕಾಂತಿಯೆಂಬೆಳದಳಿರು
ಚಿಗುರಿರ್ದ ಬಾಹುಲತೆ-
ಗಾಗಾರೆ!
ಯೋಗಿಗಳಿಗಾಧಾರೆ!

ಮೂಲೋಕದೊಳಗಿಡದ
ಮಾಣಿಕದ ತೇಜದಿಂ
ರಾಜಿಸುವ ಕೈಬಳೆಯ
ಸಿಂಗಾರಿ!
ಹೊಸಬೆಡಗ ಬಿಂಗಾರಿ!

ಮುಂಜಾನೆ ಪೊಳ್ತಿನೊಳು
ಬಾಯ್ದೆರೆದ ತಾವರೆಯು
ಮಾರ್ಮಲೆವ ಕೈಗಳನು
ಪೊಂದಿಹಳೆ!
ಅನುದಿನವು ಕರುಣೆಯ-
ನ್ನೊಂದಿಹಳೆ!
ಅಸಮಾನದಿಂದಿಹಳೆ!

ಕೆಚ್ಚನ್ನ ರತ್ನಗಳ
ಕಿರಣಗಳ ತೆರೆಯೆಂಬ
ಸಂಜೆಯಲಿ ಬೆರಲುಗಳ
ಶಿಖರಗಳಿನೊಗೆತರ್ಪ
ಚಂದಿರರೊ ಎಂದೆನಲ್
ಸುಂದರದ ನಖಗಳಿಂ
ಬಂಧುರೆಯೆ!
ಚಿತ್ರಭಾ ಮಂದಿರೆಯೆ!

ನಕ್ಷತ್ರ ಮಾಲೆಗಳ
ಲೀಲೆಯನ್ನೇಳಿಸುವ
ಪಟಿಕಮಣಿ ಮಾಲೆಗಳ
ಸಾಲಿಸಿಂ ನಗುತೆಸೆವ
ಕುಚಕುಂಭ ಭಾರದಿಂ
ನಸುಬಾಗಿ ಬಳುಕುತಿಹ
ಮಧ್ಯದೊಳ್ ವ್ಯಕ್ತತೆಯ-
ನಾಂತಿರುವ ತಿವಳಿಗಳ
ತೆರೆಗಳಿಂ ಗೋಚರಿಪ
ಸೌಂದರ್ಯ ಸಾಗರೆಯೆ!
ಕಿಂಕರರ ಸಂಪತ್ತಿ-
ಗಾಗರೆಯೆ!

ಸೌವರ್ಣ ಕುಂಭಗಳ
ಜಂಭದಿಂ ಮುಂಬರಿದು
ಶೋಭಿಸುವ ಕುಚಕುಂಭ
ಭಾರದಿಂ ಬಳುಕುವಳೆ!

ಕಾರುಣ್ಯ ರಸ ತುಂಬಿ
ತುಳುಕುವಳೆ!

ದುಂಡಗಿಹ ಹೊಕ್ಕುಳ ಸ-
ರೋವರದ ತೀರದಲಿ
ನೆಲಸಿರುವ ಹಾವಸೆಯ
ಪಾಂಗಿನಿಂದೆಸೆವ ರೋ-
ಮಾವಳೀ ಭೂಷಣೆಯೆ!
ಸರಸ ಸಂಭಾಷಣೆಯೆ!

ಒಳ್ನುಡುವ ನಾವರಿಸು-
ತೊಲಿದುಲಿವ ನೇವುರದಿ
ನನೆವಿಲ್ಲ ಬಲ್ಲಹನ
ಪೂವಿಲ್ಲ ಗೆಲ್ಲವನು
ಮೆಟ್ಟಿಹಳೆ!
ರತ್ನಗಳ ಬಟ್ಟೆಯ-
ನ್ನುಟ್ಟಿಹಳೆ!

ಪದ್ಮರಾಗದಿನೆಸೆವ
ಮೇಖಲೆಯಿನೊಪ್ಪುತಿಹ
ಜಘನಗಳ ಶೋಭೆಯಿಂ
ಮೇರುವಿನ ಸಮತಲವ
ಮೀರಿಹಳೆ!
ಉನ್ನತದ ಮಹಿಮೆಯ-
ನ್ನೇರಿಹಳೆ! ॥ ೨ ॥

ಅರಳಿರ್ದ ಬಾಗೆ ಹೂ-
ಗಳತೆರದಿ ಕೆಂಬಣ್ಣ-
ದಿಂದೆಸೆಯುವುತ್ತಮ ದು-
ಕೂಲದಿಂ ಮರೆಯಾದ
ಸೌಂದರ್ಯದೂರುಗಳ
ಶೋಭೆಯಿಂ ಸಿಂದೂರ-
ಮಂಬಳಿದು ಕೆಂಪೇರಿ-
ದಿಂದ್ರನಾನೆಯ ಸೊಂಡ-

ಲಿಗೆ ಮಸಿಯ ಬಳಿಯುವಳೆ!
ವೈಭವದೆ ಮೆರೆಯುವಳೆ!

ನುಣುಪಿನಿಂ ಮಿನುಗುತಿಹ
ನೀಲೋತ್ಪಲಂಗಳಿಂ
ಪೊಸೆದಂಗಜನ ಬತ್ತ-
ಳಿಕೆಯೆಂಬ ಶಂಕೆಯ-
ನ್ನೊದವಿಸುವ ಜಂಘೆಗಳಿ-
ನೊಪ್ಪುವಳೆ!
ಈರೇಳು ಭುವನಗಳ
ಸುಂದರಿಯೆನಿಪ್ಪವಳೆ!

ತಲೆವಾಗಿದಮರ ವಧು-
ಗಳ ನೀಲ ಕುಂತಲದ
ಕಾಂತಿಯೆಂಬೆಳಗರಿಕೆ-
ಕುಡಿಗಳಿಂದರ್ಚನೆಯ
ಕೈಕೊಂಡ ಕಾಲುಗುರ

ಚಂದ್ರಿಕೆಯಿನವರನುರೆ
ಹರಸಿದಳೆ!
ಮನದೊಳಗೆ ಶಾಂತಿಯನು
ಬರಿಸಿದಳೆ!

ಇಂದ್ರಾಗ್ನಿ ಯಮ ವಾಯು
ಮೊದಲಾದ ದಿಕ್ಕುಗಳ
ಪಾಲಕರ ಮಕುಟಮಣಿ-
ಯಿಂದೊಗೆಯುವೆಳವಿಸಿಲ
ಕಾಂತಿಯಿಂ ಥಳ ಥಳಿಪ-
ಲಕ್ತಕೆಯ ಕೆಂಪೇರಿ
ಜವ್ವನದ ಹೊಸ ಹೊಗರ
ಹೊನಲಿನಲಿ ತೇಲುವಡಿ-
ದಾವರೆಯಿನೊಪ್ಪಿಹಳೆ!
ದೇಹಾರ್ಧದಿಂ ಶಿವನ-
ನಪ್ಪಿಹಳೆ! ॥ ೩ ॥

ಝುಗ ಝುಗಿಪ ನವರತ್ನ
ಪೀಠದಲಿ ಕುಳಿತಿಹಳೆ!

ಮಣಿಮಯದ ತಾವರೆಯ
ಮೇಲಿರುವ ರತ್ನ ಸಿಂ-
ಹಾಸನದಲೆಸೆದಿಹಳೆ!
ಶಂಖ ಪದ್ಮಗಳೆಂಬ
ನಿಧಿಗಳಿಂ ಬಳಸಿಹಳೆ!

ಅಲ್ಲಿ ವಿಘ್ನೇಶನಿಂ,
ದುರ್ಗೆಯಿಂ, ವಟುಕನಿಂ,
ಕ್ಷೇತ್ರ ಪಾಲಕನಿಂದ
ಕೂಡಿಹಳೆ!

ಮದಿಸಿರ್ದ ಮಾತಂಗ
ಕನ್ನಿಕೆಗಳೊಡನಿಹಳೆ!
ಮಂಜುಲಾ ಮೇನಕಾ-

ದ್ವಸ್ಸರ ಸ್ತ್ರೀಗಣದಿ
ಪೂಜಿತಳೆ!

ಅಷ್ಟ ಭೈರವರಿಂದ
ಸೇವಿತಳೆ!

ದೇವಿ! ವಾವಮಾದಿಶ-
ಕ್ತಿಗಳಿಂದ ಭಾವಿತಳೆ!

ಯಕ್ಷ ಗಂಧರ್ವಸಿ-
ದ್ಧಾಂಗನೆಗಳಿಂ ಸ್ತುತಳೆ!

ರತಿಕಾಮರಿಂದ ಮಧು-
ಮಾಸದಿಂ ಮಾನಿತಳೆ!

ಭಕ್ತರಿಗೆ ಮುಕ್ತಿಯ-
ನ್ನೀಯುವಳೆ!

ವೇದ ವೇದಾಂತಗಳ
ಜೀವಿಕೆಯೆ!

ಯೋಗಿಗಳ ಮನದೊಳಗೆ
ಹೊಳೆವವಳೆ!

ಗಾನದ ವಿನೋದವೇ
ಜೀವಾಳವಾಗಿರುವ
ವೇಣುಗೋಪಾಲನಿಂ
ಪೂಜಿತಳೆ!

ನಿಶ್ಚಲಿತ ಭಕ್ತಿಯಿಂ-
ದಜನಿಂದ ಹೊಗಳಿಕೆಯ-
ನಾಂತವಳೆ!

ವಿದ್ಯಾಧರಾಂಗನೆಗ-
ಳಿಂ ಪಂಚ ವಾದ್ಯದಿಂ
ಸಂಸ್ತುತಳೆ! ॥ ೪ ॥

ಕಿವಿಗಳೊಳು ತನಿರಸವ
ಸುರಿಯುತಿಹ ನಾದದಿಂ

ಮೆರೆಯುತಿಹ ವೀಣೆಯಿಂ
ಕಿನ್ನರರ ವೃಂದದಿಂ
ವರ್ಣಿಸಲ್ಪಡುವವಳೆ!

ಸರ್ವಸೌಭಾಗ್ಯವನು
ಕೊಡುವ ಶಕ್ತಿಯನುಳ್ಳ
ದೇವನಾರಿಯರಿಂದ
ಪೂಜಿಸಲ್ಪಡುವವಳೆ!

ಸರ್ವ ವಿದ್ಯೆಯನರಿತ
ಚಟುಲ ಗಾದೆಯ ಕಲಿತ
ಕೊರಲ ಬುಡದಲಿ ಬಲಿತ
ವರ್ಣರೇಖೆಯನಾಂತ
ನೀಲವರ್ಣದ ರೆಕ್ಕೆ
ಬಾಗೆಯಂದದ ಕೊಕ್ಕು
ಇವುಗಳನು ಧರಿಸಿರುವ
ಗಿಳಿಯ ಲಾಲಿಸುವವಳೆ!

ಕರಸರೋರುಹಗಳಿಂ
ಸ್ಫಟಿಕಮಣಿ ಮಾಲೆಯನು
ಸುಜ್ಞಾನ ಸಾರವಿಹ
ಪುಸ್ತಕವನಂಕುಶವ
ಪಾಶವನು ಧರಿಸಿರ್ದ
ಮೂರ್ತಿಯನು ಚಿಂತಿಸುವ-
ನಾವನೋ;
ಆವನ ಮುಖದೊಳಗಿಂದ
ಗದ್ಯಗಳ ಪದ್ಯಗಳ
ರೂಪಿನಿಂದೆಸೆಯುತಿಹ
ಭಾರತಿಯು ದುಮ್ಮಿಕ್ಕಿ
ಹೊಮ್ಮುವಳು.

ಯಾರಲಕ್ತಿಕೆಯಂತೆ
ಕೆಂಬಣ್ಣದಿಂ ಮೆರೆವ
ಮೂರ್ತಿಯನು ಭಾವಿಪನೊ;

ಆವನ ವಶವಾಗುವರು
ಹೆಂಗುಸರು ಗಂಡುಸರು

ಸ್ವರ್ಣವರ್ಣದನಿನ್ನ
ತನುವನಾವನು ಸೆಸೆವ-
ನವನು ಸಿರಿಗಳ ತೆರೆಯ
ನಡುವಿನಲಿ ತೇಲುವನು.

ಅರೆಯೊಡಲ ಶಿವನಿಂದ
ಸಂಪೂರ್ಣವಾಗಿರುವ
ನೀಲವರ್ಣದ ನಿನ್ನ
ಕೋಮಲದ ತನುಲತೆಯ
ಜಾನಿಪಗೆ ದೊರಕದುದ-
ದಾವುದೋ!
ಅವನಿಗಾಡುವ ಕೊಳವು
ವಾರಿಧಿಯು;
ಅವನಿಗಾಡುಂಬೊಲವು

ನಂದನವು;
ಆವನ ವಶವಾಗಿಹಳು
ಸರಸತಿಯು;
ಆವನೊಳೇ ನಿಲಸಿಹಳು
ಹರಿಸತಿಯು.

ತೀರ್ಥಗಳ ಮಂತ್ರಗಳ
ತಂತ್ರಗಳ ಯಂತ್ರಗಳ
ಮುದ್ರೆಗಳ ಶಕ್ತಿಗಳ
ಚಕ್ರಗಳ ವರ್ಣಗಳ
ಪೀಠಗಳ ತತ್ವಗಳ
ವಿದ್ಯೆಗಳ ಯೋಗಗಳ
ನಾದಗಳ ಶಬ್ದಗಳ
ವಿಶ್ವಗಳ ದೀಕ್ಷೆಗಳ
ಸರ್ವಗಳ ರೂಪಿನಿಂ–
ದೆಸೆಯುವಳೆ!

ನನ್ನಂಬೆ! ಜಗದಂಬೆ!
ಪೊರೆ ನನ್ನ ಪೊರೆ ನನ್ನ
ಪೊರೆ ನನ್ನನೆಲೆ ದೇವಿ!
ನಿನಗೆರಗುವೆನು ದೇವಿ!
ನಿನಗೆರಗುವೆನು ದೇವಿ!
ನಿನಗೆರಗು-
ತಿಹೆನು. ॥ ೫ ॥